ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 145 ಇಸಿಐ 2004

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:18.10.2004

ಇಂದ

ಸರ್ಕಾರದ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬೆಂಗಳೂರು-560 001

ಇವರಿಗೆ

✓ದಿ ಮ್ಯಾನೇಜಿಂಗ್ ಡೈರೆಕ್ಟರ್
ಮೆ॥ ದಿ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ ಬೀದರ್,
ಜಿ ಎನ್ ನಗರ, ಇಮಾಮಪುರ ಗ್ರಾಮ,
ಬೀದರ್ ತಾಲ್ಲೂಕು,
ಬೀದರ್ ಜಿಲ್ಲೆ

ಮಾನ್ಯರೇ,

ವಿಷಯ: ಮೆ॥ ದಿ ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಬೀದರ್, ಇಮಾಮಪುರ ಗ್ರಾಮ ಇವರಿಗೆ 14 ಮೆಗ್ಯಾ ಕೋ ಜನರೇಷನ್ ಘಟಕ ಸ್ಥಾಪಿಸಲು ಪರಿಸರ ವಿಮೋಚನಾ ಪತ್ರ ನೀಡಿಕೆ.

ಉಲ್ಲೇಖ:1) ದಿ. ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ ಬೀದರ್ ಇವರ ಪತ್ರ ಸಂಖ್ಯೆ: ಎನ್‌ಎಸ್‌ಎಸ್‌ಕೆ/ಪಿಎಂ/ಎಫ್‌ಇಇ/ 2003-04/ದಿನಾಂಕ: 21.06.2004.

2) ದಿ. ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ ಬೀದರ್ ಇವರ ಪತ್ರ ಸಂಖ್ಯೆ: ಎನ್‌ಎಸ್‌ಎಸ್‌ಕೆ/ಎಂಡಿ/ಇಸಿಸಿ/ 2004-05/ದಿನಾಂಕ: 20.09.2004.

******

ಮೆ॥ ದಿ. ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ ಬೀದರ್, ಇವರು ಬೀದರ್ ತಾ॥ ಬೀದರ್ ಜಿಲ್ಲೆ ಇಮಾಮಪುರ ಗ್ರಾಮ, ಜನವಾಡ ಇಲ್ಲಿ ಇವರ ಸಕ್ಕರೆ ಕಾರ್ಖಾನೆಯೊಳಗೆ 14 ಮೆಗಾ ವ್ಯಾಟ್ ಕೋ ಜನರೇಷನ್ ವಿದ್ಯುತ್ ಘಟಕ ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರ ಪತ್ರ ಸಂಖ್ಯೆ : ಕರಾಮಾನಿಮಂ 04/ಕೆಎಸ್‌ಪಿಸಿಬಿ/ಡಿಇಒ/ಸಿಎಫ್‌ಇ-ಸಿಇಎಲ್‌ಎಲ್/ ಎಇಒ-1/ಎನ್‌ಎಸ್‌ಎಸ್‌ಕೆ/2001-02/04 ದಿನಾಂಕ 04.04.2002ರಲ್ಲಿ ಸದರಿ ಕೈಗಾರಿಕೆಯನ್ನು ವಾಯು ಮತ್ತು ಜಲ ಮಾಲಿನ್ಯದ ದೃಷ್ಟಿಕೋನದಿಂದ ಮುಕ್ತಗೊಳಿಸಿದೆ.

ಕಾರ್ಖಾನೆ ಮತ್ತು ಬಾಯ್ಲರ್‌ಗಳ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿಎಫ್‌ಎಂಬಿ/ ಎಂಎಚ್‌ಬಿಸಿ/ಸಿಆರ್-53 /2004-05, ದಿನಾಂಕ : 23.08.2004 ರಲ್ಲಿ ಸದರಿ ಕೈಗಾರಿಕೆಗೆ ಆನ್‌ಸೈಟ್ ಎಮರ್ಜೆನ್ಸಿ ಪ್ಲಾನ್ ಅನುಮೋದನೆ ಮಾಡಿರುತ್ತಾರೆ.

ಈ ಇಲಾಖೆಯ ಪರಿಸರ ವಿಮೋಚನಾ ಸಮಿತಿಯು ದಿನಾಂಕ : 30.09.2004ರಂದು ನಡೆದ ಸಭೆಯಲ್ಲಿ ಸದರಿ ಕೈಗಾರಿಕೆಯು ಒದಗಿಸಿದ ಮಾಹಿತಿಯನ್ನು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಾರ್ಖಾನೆ ಮತ್ತು ಬಾಯ್ಲರ್‌ಗಳ ನಿರ್ದೇಶಕರು ನೀಡಿರುವ ಕ್ರಮವಾಗಿ ಸಮ್ಮತಿ ಪತ್ರ ಮತ್ತು ಅನುಮೋದನೆ ಕೂಲಂಕುಷವಾಗಿ ಪರಿಶೀಲಿಸಿದ ನಂತರ ಪರಿಸರ ವಿಮೋಚನಾ ಪತ್ರ ನೀಡಲು ಒಪ್ಪಿಕೊಂಡಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕಾರ್ಖಾನೆ ಮತ್ತು ಬಾಯ್ಲರ್‌ಗಳ ನಿರ್ದೇಶಕರು ವಿಧಿಸಿರುವ ಷರತ್ತುಗಳೊಂದಿಗೆ ಈ ಕೆಳಕಂಡ ನಿಬಂಧನೆಗಳನ್ನು ಸಹ ಪರಿಪಾಲಿಸುವಂತೆ ತಿಳಿಸಿ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯು ಮೆ॥ ನಾರಂಜಾ ಸಕ್ಕರೆ ಕಾರ್ಖಾನೆ ಲಿ., ಜಿ.ಎಸ್ ನಗರ ಇಮಾಮಪುರ ಗ್ರಾಮ ಜನವಾಡ ಹತ್ತಿರ, ಬೀದರ್ ತಾಲ್ಲೂಕು, ಬೀದರ್ ಜಿಲ್ಲೆ ಇವರಿಗೆ 14 ಮೆವ್ಯಾ ಸಾಮರ್ಥ್ಯದ ಕೋಜನರೇಷನ್ ವಿದ್ಯುತ್ ಘಟಕವನ್ನು (ಸಕ್ಕರೆ ಕಾರ್ಖಾನೆಯೊಳಗೆ) ಸ್ಥಾಪಿಸಲು/ಉತ್ಪಾದನೆ ಮಾಡಲು ಪರಿಸರ ವಿಮೋಚನಾ ಪ್ರಮಾಣ ಪತ್ರವನ್ನು ಈ ಮೂಲಕ ನೀಡಲಾಗಿದೆ.

1) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮ್ಮತಿ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
2) ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆಯು ವಿಧಿಸಿರುವ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
3) ಈ ವಿಮೋಚನಾ ಪತ್ರವು 5 ವರ್ಷದ ಅವಧಿಯದಾಗಿದ್ದು ನಂತರ ನವೀಕರಿಸಿಕೊಳ್ಳುವುದು.
4) ಈ ಪರಿಸರ ವಿಮೋಚನಾ ಆದೇಶವನ್ನು ರದ್ದುಗೊಳಿಸುವ ಅಥವಾ ಬದಲಾಯಿಸುವ ಹಕ್ಕನ್ನು ಇಲಾಖೆ ಕಾಯ್ದಿರಿಸಿಕೊಂಡಿದೆ.
5) ಉದ್ದಿಮೆಯು ಶೂನ್ಯ ಹರಿವು ಉಂಟು ಮಾಡುವ ಸಲುವಾಗಿ ವ್ಯರ್ಥ ನೀರನ್ನು ಉದ್ದಿಮೆಯ ಹೊರಗೆ ಬಿಡಬಾರದು.
6) ಮಳೆ ನೀರಿನ ಸಂಗ್ರಹಣೆ ವ್ಯವಸ್ಥೆಯನ್ನು ಉದ್ದಿಮೆಯಲ್ಲಿ ಅಳವಡಿಸಿಕೊಳ್ಳಬೇಕು.
7) ಉದ್ದಿಮೆಯ ಪವರ್ ಜನರೇಷನ್‌ನಲ್ಲಿ ಫಾಸಿಲ್ ಫ್ಯೂಯಲ್‌ನ್ನು ಉಪಯೋಗಿಸಬಾರದು.

8) ಸದರಿ ಉದ್ದಿಮೆಯವರು ಮೇಲ್ಕಂಡ ಷರತ್ತುಗಳ ಪಾಲನೆಯನ್ನು ಕುರಿತಂತೆ ಪ್ರತಿ 6 ತಿಂಗಳಿಗೊಮ್ಮೆ ಇಲಾಖೆಗೆ ವರದಿಯನ್ನು ಸಲ್ಲಿಸುವುದು.

9) ಉದ್ದಿಮೆಯ ಒಟ್ಟು ಪ್ರದೇಶದ ಶೇಕಡ 33 ಭಾಗದಲ್ಲಿ ಹಸಿರು ಗಿಡಮರಗಳನ್ನು ಬೆಳೆಸುವುದು.

10) ಘನ ತ್ಯಾಜ್ಯ ವಸ್ತುಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಿಧಿಸಿರುವ ಷರತ್ತುಗಳನ್ವಯ ವಿಲೇವಾರಿ ಮಾಡಬೇಕು.

ಈ ಪರಿಸರ ವಿಮೋಚನಾ ಪತ್ರ ತಲುಪಿದ ಬಗ್ಗೆ ದಯವಿಟ್ಟು ಸ್ವೀಕೃತಿ ಕಳುಹಿಸುವುದು.

ತಮ್ಮ ನಂಬುಗೆಯ

K.G. Shashikala

(ಕೆ. ಜಿ. ಶಶಿಕಲಾ)

ಸರ್ಕಾರದ ಅಧೀನ ಕಾರ್ಯದರ್ಶಿಗಳು (ಪ್ರಭಾರ)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪ್ರತಿಯನ್ನು:

1) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-1.
2) ಕಾರ್ಖಾನೆ ಮತ್ತು ಬಾಯ್ಲರ್‌ಗಳ ನಿರ್ದೇಶಕರು, ಕಾರ್ಮಿಕ ಭವನ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
3) ಅಪರ ನಿರ್ದೇಶಕರು, ಭಾರತ ಸರ್ಕಾರ, ಪರಿಸರ ಮತ್ತು ಅರಣ್ಯಗಳ ಮಂತ್ರಾಲಯ, ಪ್ರಾದೇಶಿಕ ಕಚೇರಿ (ದಕ್ಷಿಣ ವಲಯ) ಕೇಂದ್ರೀಯ ಸದನ, 4 ನೇ ಮಹಡಿ, ಇ ಮತ್ತು ಎಫ್ ವಿಭಾಗ, 17 ನೇ ಮುಖ್ಯ ರಸ್ತೆ, 2 ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-34.
4) ಹಿರಿಯ ನಿರ್ದೇಶಕರು, ತಾಂತ್ರಿಕ ಕೋಶ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
5) ಕಾರ್ಯದರ್ಶಿ(ಪರಿಸರ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಇವರ ಆಪ್ತ ಸಹಾಯಕರು.
6) ಕಂಪ್ಯೂಟರ್‌ನಲ್ಲಿ ದಾಖಲಿಸಲು ತಾಂತ್ರಿಕ ಕೋಶಕ್ಕೆ ಪ್ರತಿಯನ್ನು ಕಳುಹಿಸಿದೆ.
7) ರಕ್ಷಾ ಕಡತ.

Sy dat ECO fee 145 eco 2004 Th.r.Mys